ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ. **68/2025**

| | | |
|---|---|---|
| ಸಾಕ್ಷಿದಾರ ಹೆಸರು | ಗಿರೀಶ್ | ಸಿ.ಡಬ್ಲ್ಯೂ: 2 ಪಿ.ಡಬ್ಲ್ಯೂ: 2 |
| ತಂದೆಯ ಹೆಸರು | ಲೇಟ್ ಅಣ್ಣು | |
| ವಯಸ್ಸು | 32 ವರ್ಷ | |
| ಉದ್ಯೋಗ | ಕೂಲಿ ಕೆಲಸ | |
| ವಾಸ ಸ್ಥಳ | ಚಂದ್ರಾಪುರ ಗ್ರಾಮ, ಗೋಣಿಬೀಡು | |

ದಿನಾಂಕ: 04.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ಚಾಸಾ.1 ನನ್ನ ತಾಯಿ. ಚಾಸಾ.3 ರಿಂದ ಚಾಸಾ.10 ರವರು ನಮ್ಮ ಊರಿನವರು, ಅವರು ನನಗೆ ಗೊತ್ತು.

2. ದಿ: 13.11.2024 ರಂದು ನಮ್ಮ ಊರಿನ ಬಾಬು ರವರ ಮಗಳ ಮದುವೆಯ ಮದರಂಗಿ ಶಾಸ್ತ್ರದ ಕಾರ್ಯಕ್ರಮ ಇತ್ತು. ಆ ಕಾರ್ಯಕ್ರಮಕ್ಕೆ ನಾನು ನನ್ನ ತಾಯಿಗೆ ತಡವಾಗಿ ಬರುತ್ತೇನೆ ಎಂದು ಹೇಳಿ ಹೋಗಿದ್ದೆ. ನನ್ನ ಸ್ನೇಹಿತರಾದ ಚಾಸಾ.3 ರಿಂದ 7 ರವರು ಅಲ್ಲಿಗೆ ಬಂದಿದ್ದರು. ಅಲ್ಲಿ ಕುಣಿಯುತ್ತಿದ್ದವನ್ನು ನಾವು ನೋಡುತ್ತಿದ್ದೆವು, ಅಷ್ಟರಲ್ಲಿ ನಮಗೆ ಪರಿಚಯ ಇದ್ದ ಆರೋಪಿ ಬಂದ. ಆರೋಪಿ ಕುಣಿಯುವಾಗ ದೇವರ ಕಳಸವನ್ನು ತುಳಿದಾಗ lighting ತುಂಡಾಗುತ್ತವೆ. ಆಗ ನಾನು ಏಕೆ ಈ ರೀತಿ ಮಾಡುತ್ತಿಯಾ ಸುಮ್ಮನೆ ಇರಲು ಆಗುವುದಿಲ್ಲವ ಎಂದು ಕೇಳಿದೆ. ಆಗ ಆರೋಪಿ ನೀನು ಯಾರು ಕೇಳಲು ಎಂದು ಕೇಳಿದ ಅಷ್ಟರಲ್ಲಿ ಚಾಸಾ.3 ರಿಂದ 7 ರವರು ಮತ್ತು 9 ರವರು ಊರಿನವರು ನನಗೆ ಏಕೆ ನೀನು ಮಾತನಾಡುತ್ತೀಯಾ ಎಂದು ಹೇಳಿದ್ದರು. ಆಗ ಆರೋಪಿಗೆ ಹೊರಗೆ ಹೋಗಲು ಊರಿನವರು ಹೇಳಿದ್ದರು.

3. ನಂತರ ಮದುವೆ ಮನೆಯವರು ಊಟ ಮಾಡದವರು ಊಟ ಮಾಡಿ ಎಂದು

ಹೇಳಿದರು. ನಾನು, ಚಾಸಾ.3 ರಿಂದ 5 ಊಟ ಮಾಡಲು ಹೋದೆವು. ಚಾಸಾ.6 ರಿಂದ 8 ರವರು ಸಹ ಊಟಕ್ಕೆ ಬಂದಿದ್ದರು. ನಾವು ಊಟ ಮಾಡುತ್ತಿದ್ದಾಗ ಆರೋಪಿ ನಮ್ಮ ಹಿಂದಿನಿಂದ ಬಂದು ಕಳಸವನ್ನು ತುಳಿದಿದ್ದನು ಕೇಳಲು ನೀನು ಯಾರು ಎಂದು ಬೋಳಿ ಮಗ ಸೂಳೆ ಮಗ ಎಂದು ನನಗೆ ಬೈದ. ಅಲ್ಲಿಯೇ ಇದ್ದ ಕಬ್ಬಿಣದ ಊಟಿಯಿಂದ ನನ್ನ ತಲೆಯ ಮಧ್ಯಭಾಗ ಮತ್ತು ಬಲಭಾಗಕ್ಕೆ ಹೊಡೆದ. ಆರೋಪಿ ಹೊಡೆದಿದ್ದರಿಂದ ನನ್ನ ಹಲ್ಲು ಮುರಿಯಿತು. ನಾನು ಜೋರಾಗಿ ಕಿರುಚಿಕೊಂಡೆ. ಅಷ್ಟರಲ್ಲಿ ನನ್ನ ಸ್ನೇಹಿತರಾದ ಚಾಸಾ.3 ರಿಂದ 8 ರವರು ಬಂದು ಕೆಳಗೆ ಬಿದಿದ್ದ ನನ್ನನ್ನು ಮೇಲೆ ಎಬ್ಬಿಸಿದ್ದರು. ಚಾಸಾ.3 ಅನೀಲ ಆರೋಪಿಯ ಕೈಯಲ್ಲಿ ಇದ್ದ ಕಬ್ಬಿಣದ ಊಟಿಯನ್ನು ತೆಗೆದು ಬಿಸಾಕಿದರು.

4. ನಂತರ ಚಾಸಾ.3 ರಿಂದ 5 ರವರು ನನ್ನನ್ನು ಚಾಸಾ.8 ರಘು ರವರ ಆಟೋದಲ್ಲಿ ಮೂಡಿಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆ ಆಸ್ಪತ್ರೆಯಲ್ಲಿ ನನಗೆ 14 ಹೊಲಿಗೆಗಳನ್ನು ಹಾಕಿದ್ದರು. ನಂತರ ಚಿಕ್ಕಮಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋದರು. ಒಂದು ದಿನ ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದು ನಂತರ ಬೆಂಗಳೂರಿನ ಆಸ್ಪತ್ರೆಗೆ ಹೋಗಿದ್ದೆ. 1 ತಿಂಗಳು  ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದೆ. ನಂತರ ಮಂಗಳುರು, ಹಾಸನ ಮತ್ತು ಬೆಂಗಳೂರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದೆ. ಘಟನೆಯ ಬಗ್ಗೆ ನನ್ನ ತಾಯಿ ಪೊಲೀಸರಿಗೆ ದೂರನ್ನು ನೀಡಿದ್ದರು.

5. ಪೊಲೀಸರು ಮನೆಗೆ ಬಂದು ವಿಚಾರಣೆಯನ್ನು ಮಾಡಿದ್ದರು. ಆ ದಿನ ನನಗೆ ಹಲ್ಲೆ ಮಾಡಿದ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ. ಆ ದಿನ ಆರೋಪಿ ಹಲ್ಲೆ ಮಾಡಲು ಉಪಯೋಗಿಸಿದ್ದ ಊಟಿ ಇದೇ ಎಂದು ಸಾಕ್ಷಿ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಶ್ರೀ ಎಂ.ಎಂ.ಆರ್. ವಕೀಲರಿಂದ – ಆರೋಪಿತನ ಪರವಾಗಿ</u>

6. ನಾನು ಆ ದಿನ ಮದುವೆ ಕಾರ್ಯಕ್ರಮಕ್ಕೆ 11 ಗಂಟೆಗೆ ಹೋಗಿದ್ದೆ. ಆ ಕಾರ್ಯಕ್ರಮ ರಾತ್ರಿ ಎಲ್ಲಾ ನಡೆಯುತ್ತಿತ್ತು. ಆ ಕಾರ್ಯಕ್ರಮದಲ್ಲಿ ಡಿ.ಜೆ ಹಾಕಿದ್ದರು. ಛಾಯಚಿತ್ರ ಮತ್ತು ವಿಡಿಯೋ ಚಿತ್ರೀಕರಣ ನಾವು ಹೋದಾಗ ಇರಲಿಲ್ಲ. ನಾನು ಕಾರ್ಯಕ್ರಮಕ್ಕೆ ಹೋದಾಗ ಅಲ್ಲಿ 60 ರಿಂದ 70 ಜನ ಸೇರಿದ್ದರು. ಛಾಯಚಿತ್ರ ಮತ್ತು ವಿಡಿಯೋ ಚಿತ್ರೀಕರಣ ಮಾಡುವವರು ಕಾರ್ಯಕ್ರಮ ಮುಗಿಯುವವರೆಗೂ ಅವರ ಕೆಲಸವನ್ನು ಮಾಡುತ್ತಾರೆ. ಕಾರ್ಯಕ್ರಮ ನಡೆಯುವ ಸಮಯಲ್ಲಿ 12 ಗಂಟೆಗೆ ನಾವು ಊಟಕ್ಕೆ ಹೋಗಿದ್ದೆವು. ಊಟವನ್ನು ನಾವೇ ತಟ್ಟೆಯಲ್ಲಿ ಹಾಕಿಸಿಕೊಂಡು ತಿನ್ನುತ್ತಿದ್ದೆವು. ಅಡುಗೆಯನ್ನು ಪ್ರತ್ಯೇಕವಾಗಿ ಬೇರೆ ಕಡೆ ಮಾಡುತ್ತಿದ್ದರು. ಕಾರ್ಯಕ್ರಮ ನಡೆಯುವ ಸ್ಥಳದಿಂದ ಊಟ ಮಾಡುತ್ತಿದ್ದ ಸ್ಥಳ 10 ಅಡಿ ಅಂತರದಲ್ಲಿ ಇತ್ತು. ಚಾಸಾ.3 ರಿಂದ 7 ನಮ್ಮ ಸಂಬಂಧಿಕರು ಎಂದರೆ ಸರಿ. ಚಾಸಾ.3 ರಿಂದ 7 ಆ ದಿನ ಮದುವೆ ಕಾರ್ಯಕ್ರಮದಲ್ಲಿ ಇದ್ದರು. ನೀವು ಕೂಗಿಕೊಂಡ ನಂತರ ಚಾಸಾ.3 ರಿಂದ 7 ಬಂದರಾ ಎಂದರೆ ಸಾಕ್ಷಿ ಅಕ್ಕ ಪಕ್ಕದಲ್ಲಿ ಇದ್ದರು, ಬಂದರು ಎಂದು ನುಡಿಯುತ್ತಾರೆ. ಊಟಕ್ಕೆ ಅರೆಂಜ್ ಮಾಡಿದ್ದ ಪಕ್ಕದಲ್ಲಿ ಕಬ್ಬಿಣದ ಊಟಿ ಇತ್ತು. ಕಬ್ಬಿದ ಊಟಿಯನ್ನು ತೆಗೆದುಕೊಂಡು ಬಂದಿದ್ದನ್ನು ಆರೋಪಿ ಹಿಂಬದಿಯಿಂದ ಬಂದಿದ್ದರಿಂದ ಯಾರು ನೋಡಲಿಲ್ಲ. ಹಿಂಬದಿಯಿಂದ ಬಂದಾಗ ಆರೋಪಿಯ ಜೊತೆ ಯಾರು ಇರಲಿಲ್ಲ. ಕಳಸವನ್ನು ಆರೋಪಿ ತುಳಿದರು ಎಂದು ಹೇಳುವ ಸಮಯದಲ್ಲಿ 11.30 ರ ಸಮಯವಾಗಿತ್ತು. ಆರೋಪಿ ಕಳಸವನ್ನು ತುಳಿದಾಗ ನಾನು ಆತನಿಗೆ ಏಕೆ ಕಳಸವನ್ನು ತುಳಿದೆ, lighting ಹಾಳಾಯಿತು ಎಂದು ಹೇಳಿದ್ದೆ. ಲೈಟಿಂಗ್ ಹಾಳಾಗಿದ್ದರಿಂದ ಲೈಟ್ ಇರಲಿಲ್ಲ ಎಂದರೆ ಸಾಕ್ಷಿ ಸಿರಿಯಲ್ಲಿ ಲೈಟ್ ಮಾತ್ರ ತುಂಡಾಗಿತ್ತು ಎಂದು ನುಡಿಯುತ್ತಾರೆ.

7. ಆರೋಪಿ ಹೊಡೆದಾಗ ಸ್ವಲ್ಪ ರಕ್ತ ಬರುತ್ತಿತ್ತು. ಆರೋಪಿ ಹೊಡೆದಾಗ ನನಗೆ ಪ್ರಜ್ಞೆ ಹೋಗಿರಲಿಲ್ಲ. ಕಬ್ಬಿಣದ ಊಟಿಗೆ ರಕ್ತ ಆಗಿದ್ದನ್ನು ನಾನು

ಗಮನಿಸಲಿಲ್ಲ. ನನಗೆ ಪೆಟ್ಟಾದಾಗ 12.30 ರ ಸಮಯ ಆಗಿತ್ತು. ಆ ದಿನ ಚಾಸಾ.8 ರವರ ಆಟೋ ಕಾರ್ಯಕ್ರಮದಲ್ಲಿ ಇತ್ತು. ಆ ದಿನ ನನ್ನನ್ನು ಚಾಸಾ.3 ರಿಂದ 5 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಾನು ವೈದ್ಯರಿಗೆ ಹಲ್ಲೆಯ ಕಾರಣದಿಂದ ಗಾಯಗಳು ಆಗಿವೆ ಎಂದು ತಿಳಿಸಿದ್ದೆ. ಮೂಡಿಗೆರೆಯ ಆಸ್ಪತ್ರೆಗೆ ಬಂದಾಗ ಎಷ್ಟು ಸಮಯ ಆಗಿತ್ತು ಎಂದು ನಾನು ನೋಡಲಿಲ್ಲ. ಮೂಡಿಗೆರೆಯಲ್ಲಿ ಚಿಕಿತ್ಸೆಯನ್ನು ಎಷ್ಟು ಅವಧಿಯ ವರೆಗೆ ಪಡೆದಿದ್ದೆ ಎಂದು ನನಗೆ ನೆನಪಿಲ್ಲ. ನನಗೆ ಚಿಕಿತ್ಸೆ ನೀಡಿದ ಮೂಡಿಗೆರೆ ಆಸ್ಪತ್ರೆಯ ವೈದ್ಯರ ಹೆಸರು ನನಗೆ ಗೊತ್ತಿಲ್ಲ. ಪೊಲೀಸರು ಆಸ್ಪತ್ರೆಗೆ ಬಂದು ಹೇಳಿಕೆಯನ್ನು ಪಡೆಯಲಿಲ್ಲ.

8. ನಾನು ಹೇಳಿದಂತೆ ಪೊಲೀಸರಿಗೆ ಹಲ್ಲೆಯಿಂದ ಗಾಯಗಳು ಆಗಿವೆ ಎಂದು ಹೇಳಿದ್ದರೆ ಪೊಲೀಸರು ಆಸ್ಪತ್ರೆಗೆ ಬಂದು ಮಾಹಿತಿ ಪಡೆಯುತ್ತಿದ್ದರು, ನಾನು ಆ ರೀತಿ ವೈದ್ಯರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ದಿಃ 14.11.2024 ರಂದು ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆವು, ಸಮಯ ನೆನಪಿಲ್ಲ. ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೆ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಹೇಳಲು ಆಗುವುದಿಲ್ಲ. ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ ಒಂದು ದಿನ ಚಿಕಿತ್ಸೆ ಪಡೆದು ನಂತರ ಬೆಂಗಳೂರಿನ ಆಸ್ಪತ್ರೆಗೆ ಹೋಗಿದ್ದೆ. ಚಿಕ್ಕಮಗಳೂರಿನ ಆಸ್ಪತ್ರೆಯ ವೈದ್ಯರಿಗೆ ಗಾಯಗಳು ಯಾವ ರೀತಿ ಆಗಿದ್ದವು ಎಂದು ಹೇಳಿದ್ದೇನೆ. ಬೆಂಗಳೂರಿನ 3 ಆಸ್ಪತ್ರೆಗಳಲ್ಲಿ ನಾನು ಚಿಕಿತ್ಸೆ ಪಡೆದಿದ್ದೇನೆ. ಯಾವ ಯಾವ ದಿನಾಂಕದಂದು ಯಾವ ಯಾವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದೆ ಎಂದು ಹೇಳಲು ಆಗುವುದಿಲ್ಲ.

9. ಪೊಲೀಸರಿಗೆ ಹೇಳಿಕೆಯನ್ನು ಡಿಸೆಂಬರ್ ತಿಂಗಳಿನಲ್ಲಿ ನೀಡಿದ್ದೆ. ಪೊಲೀಸರು ಹೇಳಿಕೆಯನ್ನು ನಮ್ಮ ಮನೆಯಲ್ಲಿ ಪಡೆದಿದ್ದರು. ಹೇಳಿಕೆಯನ್ನು ಚಾಸಾ.21 ರವರು ಪಡೆದಿದ್ದರು. ಮು.ಮಾ.1 ರ ತರಹದ ಮುದ್ದೆ ಮಾಲುಗಳು ಶಾಮಿಯಾನದಲ್ಲಿ ಸಿಗುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ಕಬ್ಬಿಣದ ಊಟಿನಿಂದ ಹಲ್ಲೆ ಮಾಡಿದರೆ ಅದರಲ್ಲಿ ರಕ್ತದ ಕಲೆ ಇರುತ್ತವೆ ಎಂದರೆ ಸರಿ. ಮು.ಮಾ.1 ರ ಮೇಲೆ ರಕ್ತದ ಕಲೆ ಇಲ್ಲ ಎಂದರೆ ಸರಿ. ಮು.ಮಾ.1 ಅನ್ನು ಈ

ಕೇಸಿಗಾಗಿ ಪೊಲೀಸರ ಜೊತೆ ಶಾಮೀಲ್ ಆಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಾರ್ಯಕ್ರಮದಲ್ಲಿ ಡ್ಯಾನ್ಸ್ ಮಾಡುವಾಗ ಕಲ್ಲಿನ ಮೇಲೆ ಬಿದ್ದು ಪೆಟ್ಟು ಮಾಡಿಕೊಂಡಿದ್ದರಿಂದ ಗಾಯಗಳು ಆಗಿವೆ ಎಂದರೆ ಸುಳ್ಳು. ಆರೋಪಿಗೂ ನನಗೂ ಕೆಲಸದ ವಿಚಾರದಲ್ಲಿ ದ್ವೇಷ ಇದ್ದ ಕಾರಣ ಆತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಹಲ್ಲೆ ಮಾಡಿದ ಎಂದು ಹೇಳುವ ಸ್ಥಳದ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಮ್ಯಾನುಯಲ್ ರವರ ತೋಟ, ಉತ್ತರಕ್ಕೆ ಬಾಬು ರವರ ಮನೆ, ದಕ್ಷಿಣಕ್ಕೆ ಸುಧಾಕರ್ ರವರ ಮನೆ ಬರುತ್ತದೆ. ಆರೋಪಿ ನನಗೆ ಯಾವುದೇ ಹಲ್ಲೆಯನ್ನು ನಾನು ಹೇಳಿದಂತೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ.3 ರವರು ಆರೋಪಿಯ ಕೈಯಿಂದ ಊಟಿಯನ್ನು ತೆಗೆದುಕೊಂಡು ಯಾವ ಕಡೆಗೆ ಬಿಸಾಕಿದ್ದರು ಎಂದು ನಾನು ಗಮನಿಸಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮುದ್ದೆ ಮಾಲಿಗೂ ಆರೋಪಿಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ